ಶ್ರೀ ಸಿದ್ದುಸಾವದಿ(ಜಮಖಂಡಿ)143(21)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) 2006–07ರಲ್ಲಿ ಜಮಖಂಡಿ ತಾಲ್ಲೂಕಿನಲ್ಲಿ ಸೈಕಲ್‌ಗಳನ್ನು ವಿತರಿಸಲಾಗದೇ ಇರುವ ಶಾಲೆಗಳ ಸಂಖ್ಯೆ ಎಷ್ಟು, ಹಾಗೂ ಸೈಕಲ್ ಪಡೆಯದೇ ಇರುವ ಮಕ್ಕಳ ಸಂಖ್ಯೆ ಎಷ್ಟು,

ಆ) ಈ ಶಾಲೆಗಳಲ್ಲಿ ಹಿಂದಿನ ವರ್ಷ ಸೈಕಲ್ ಪಡೆಯದ ಮಕ್ಕಳಿಗೆ ಈ ವರ್ಷವಾದರೂ ಸೈಕಲ್‌ಗಳನ್ನು ಕೊಡಲಾಗುವುದೇ, ಇಲ್ಲವಾದಲ್ಲಿ ಕಾರಣಗಳನ್ನು ತಿಳಿಸುವುದು,

ಇ) ಈ ವರ್ಷ ಅಂದರೆ 2007–08ರಲ್ಲಿ ಸೈಕಲ್ ವಿತರಿಸಲು ಅನುಸರಿಸುವ ಮಾನ ದಂಡಗಳೇನು,

ಈ) ಅಂಗವಿಕಲ ಮಕ್ಕಳಿಗೆ ಮೂರು ಚಕ್ರದ ಸೈಕಲ್ ವಿತರಿಸುವ ಯೋಜನೆ ಹಾಕಿಕೊಳ್ಳಲಾಗಿದೆಯೇ, ಇಲ್ಲವಾದಲ್ಲಿ ಕಾರಣಗಳೇನು?

ಶ್ರೀ ಬಸವರಾಜ ಎಸ್ ಹೊರಟ್ಟಿ

ಅ) 2006–07ನೇ ಸಾಲಿನಲ್ಲಿ ಯೋಜನೆಯ ಪ್ರಾರಂಭದಲ್ಲಿ ಜಮಖಂಡಿ ತಾಲ್ಲೂಕಿನಲ್ಲಿ 904 ವಿದ್ಯಾರ್ಥಿಗಳನ್ನು ಫಲಾನುಭವಿಗಳೆಂದು ಗುರುತಿಸಿದ್ದು, ಎಲ್ಲಾ ವಿದ್ಯಾರ್ಥಿಗಳಿಗೆ ಸೈಕಲ್‌ಗಳನ್ನು ವಿತರಿಸಲಾಗಿದೆ

ಆದರೆ ದಿನಾಂಕ 21–02–2007ರಲ್ಲಿ 229 ವಿದ್ಯಾರ್ಥಿಗಳನ್ನು ಹಾಗೂ ಈ ದಿನಾಂಕಕ್ಕೆ [4–7–2007] ಇನ್ನೂ 452 ವಿದ್ಯಾರ್ಥಿಗಳನ್ನು ಫಲಾನುಭವಿಗಳೆಂದು ತಡವಾಗಿ ಗುರ್ತಿಸಿದ್ದರ ಹಿನ್ನೆಲೆಯಲ್ಲಿ ಒಟ್ಟು 681 ವಿದ್ಯಾರ್ಥಿಗಳಿಗೆ 2006–07ನೇ ಸಾಲಿಗೆ ಬೈಸಿಕಲ್‌ಗಳನ್ನು ವಿತರಿಸಿರುವುದಿಲ್ಲ

ಆ) ಇದರ ಬಗ್ಗೆ ಪರಿಶೀಲಿಸಲಾಗುವುದು

ಇ) 2006–07ನೇ ಸಾಲಿಗೆ ಬಿ ಪಿ ಎಲ್ ಕಾರ್ಡ್ ಹೊಂದಿರುವ ಕುಟುಂಬಗಳ ಮಕ್ಕಳನ್ನು ಫಲಾನುಭವಿಗಳೆಂದು ಗುರುತಿಸಲಾಗಿತ್ತು

ಕಳೆದ ಸಾಲಿನಲ್ಲಿನ ತೀರ್ಮಾನದ ಬಗ್ಗೆ 2007–08ನೇ ಸಾಲಿಗೆ ಪರಿಶೀಲಿಸಲಾಗುತ್ತಿದೆ

ಈ) ಇಲ್ಲ

ಶ್ರೀ ಸಿದ್ದುಸಾವದಿ(ಜಮಖಂಡಿ)144(35)

ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ರಾಜ್ಯದಲ್ಲಿ ಇಂಜಿನಿಯರಿಂಗ್, ಡಿಪ್ಲೋಮಾದಂತಹ ಕಾಲೇಜುಗಳನ್ನು ಪ್ರಾರಂಭಿಸಲು ಇರುವ ನಿಯಮಾವಳಿಗಳೇನು?

ಆ) ಈಗಾಗಲೇ ರಾಜ್ಯದಲ್ಲಿ ಇದ್ದ ಇಂಜಿನಿಯರಿಂಗ್, ಡಿಪ್ಲೋಮಾ ಮತ್ತು ಇನ್ನಿತರ ವೃತ್ತಿಪರ ಕಾಲೇಜುಗಳ ಸಂಖ್ಯೆ ಎಷ್ಟು, ಜಿಲ್ಲಾವಾರಿ ಮಾಹಿತಿ ಒದಗಿಸುವುದು,

ಇ) ಜಮಖಂಡಿ ತಾಲ್ಲೂಕಿನಲ್ಲಿಯೂ ಈ ಕಾಲೇಜುಗಳ ಬೇಡಿಕೆ ಇದ್ದದ್ದು ಸರ್ಕಾರದ ಗಮನಕ್ಕೆ ಬಂದಿದೆಯೆ, ಬಂದಿದ್ದರೆ, ಯಾವಾಗ ಪ್ರಾರಂಭಿಸಲಾಗುವುದು?

ಈ) ಅನೇಕ ಕಾಲೇಜುಗಳನ್ನು ಇದ್ದ ಊರುಗಳಲ್ಲೇ ಮತ್ತೊಂದು ಪ್ರಾರಂಭಿಸುವುದರ ಮೂಲಕ ಇದ್ದದ್ದಕ್ಕೂ ತೊಂದರೆ ಮತ್ತು ಬೇರೆಯವರಿಗೂ ಅವಕಾಶ ಇಲ್ಲದಂತಾಗಿ ಹಿಂದುಳಿದ ಪ್ರದೇಶದ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದರೆ, ಹೇಗೆ ಸರಿಪಡಿಸಲಾಗುವುದು?